# ತಿರುಗಿಬಿದ್ದ ಸ್ವರಾ



ಬಾಲಿವುಡ್‌ನಲ್ಲಿ 'ಸ್ವಜನ ಪರಕೀಯ' ಚರ್ಚೆಯ ಕಾವು ಇನ್ನೂ ಇಳಿದಿಲ್ಲ. ಬಾಲಿವುಡ್‌ನಲ್ಲಿ ತಳವೂರಿರುವ ಸಿನಿಮಾ ಕುಟುಂಬಗಳು ಸ್ವಜನ ಪಕ್ಷಪಾತ ನಡೆಸುತ್ತಿವೆ ಎನ್ನುವ ಆರೋಪ ಹಳೆಯದ್ದೇ. ಸುಶಾಂತ್‌ಸಿಂಗ್ ಆತ್ಮಹತ್ಯೆಯ ಬಳಿಕ ಅದರ ಮೇಲಿನ ಚರ್ಚೆ ವಿಭಿನ್ನ ರೀತಿಯಲ್ಲಿ ಪ್ರಕಟವಾಗುತ್ತಿದೆ. ಕೇವಲ ಕಪ್ಪು–ಬಿಳುಪು ಚರ್ಚೆ ನಡೆಯದೆ, ಅದರೆಲ್ಲ ಸಾಧಕ ಬಾಧಕಗಳೂ ಈ ಚರ್ಚೆಯಲ್ಲಿ ಒಳಗೊಳ್ಳುತ್ತಿರುವುದು ವಿಶೇಷ. ಈ ಚರ್ಚೆಗೆ ಈಗ ಸ್ವರಾ ಭಾಸ್ಕರ್ ಎಂಬ ಬಂಡುಕೋರ ನಟಿಯೂ ಸೇರಿಕೊಂಡಿದ್ದಾರೆ.

ಸ್ವರಾ ಭಾಸ್ಕರ್ ವಿರುದ್ಧ 'ಈಕೆ ಬಿಗ್ರೇಡ್ ನಟಿ' ಎಂದು ಕಂಗನಾ ಕಿಡಿಕಾರಿದ್ದು ಹಳೆಯ ಸುದ್ದಿ. ಕಂಗನಾ ಹೇಳಿಕೆಗೆ ತಿರುಗೇಟು ನೀಡಿರುವ ಸ್ವರಾ ಭಾಸ್ಕರ್, 'ಹಿಂದಿ ಸಿನಿಮಾ ಉದ್ಯಮ ಅತ್ಯಂತ ಕೆಟ್ಟ ಸ್ಥಳ. ಇಲ್ಲಿರುವ ಬಹುತೇಕರು ಹೃದಯಹೀನರು' ಎಂದಿರುವುದು ಹೊಸ ಸುದ್ದಿ.

ಆದರೆ ಸ್ವರಾ ಭಾಸ್ಕರ್ ಇದನ್ನು ಹೇಳುವಾಗಲೂ ಅತ್ಯಂತ ವಸ್ತುನಿಷ್ಠವಾಗಿ ವಿಶ್ಲೇಷಿಸಿರುವುದು ಗಮನಾರ್ಹ. 'ಹಿಂದಿ ಚಿತ್ರೋದ್ಯಮ ಈ ಹೃದಯಹೀನರು, ಖಳನಾಯಕ ಮನೋಭಾವದವರು, ತಣ್ಣಗಿನ ಸ್ವಭಾವದವರಿಂದ ಉದಯಿಸಿದೆ ಎನ್ನುವುದು ಬಹಳ ವಿಷಾದದ ಸಂಗತಿ. ಆದರೆ ಇಡಿಯಾಗಿ ಹೀಗಿದೆ ಎಂದು ನಾನು ಒಪ್ಪುವುದಿಲ್ಲ. ಬಾಲಿವುಡ್ ಅತ್ಯಂತ ಸ್ಪರ್ಧಾತ್ಮಕವಾಗಿದ್ದು, ಶಕ್ತಿ ಪ್ರದರ್ಶನದಲ್ಲಿ ತುಂಬಾ ಕ್ರೂರವಾಗಿದೆ ಎನ್ನುವುದು ನಿಜ. ನಮ್ಮ ಬದುಕು ಮತ್ತು ಸಮಾಜವೂ ಹಾಗೆಯೇ ಇದೆಯಲ್ವಾ? ಬಾಲಿವುಡ್ ಉದ್ಯಮ ಎನ್ನುವುದು ಇವತ್ತು ಮುಕ್ತ ಮಾರುಕಟ್ಟೆಯಾಗಿದೆ. ಇದೊಂದು ಖಾಸಗಿ ಉದ್ಯಮ. ಇಲ್ಲಿ ಬಹುತೇಕರು ಕಾಂಟ್ರಾಕ್ಟ್ ಕಾರ್ಮಿಕರು. ಹಾಗಾಗಿ ಈ ರೀತಿಯ ನೆಗೆಟಿವ್ ಸ್ವರೂಪವೂ ಹಾಸುಹೊಕ್ಕಾಗಿದೆ' ಎಂದಿದ್ದಾರೆ ಸ್ವರಾ ಭಾಸ್ಕರ್.

ಬಾಲಿವುಡ್ ಸ್ವಜನರು– ಪರಕೀಯರು ಎಂಬ ಚರ್ಚೆಯ ಬಗ್ಗೆಯೂ ಸ್ವರಾ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. 'ಈ ಚರ್ಚೆಯನ್ನು ನಾನು ಆರಂಭಿಸಿದ್ದಲ್ಲ. ನನ್ನ ಹೆಸರನ್ನು ಬೇರೆಯವರು ಹೇಳಿ ಚರ್ಚೆಗೆ ಎಳೆದುತಂದಿದ್ದಾರೆ. ತಾಪ್ಸೀ ಪನ್ನೂ, ರಿಚಾ ಛಡ್ಡಾ, ಅನುರಾಗ್ ಕಾಶ್ಯಪ್ ಅವರನ್ನೂ ಈ ಚರ್ಚೆಗೆ ಎಳೆದು ತರಲಾಗಿದೆ. ಆದರೆ ಚರ್ಚೆಯ ಸ್ವರೂಪ ಪರ–ವಿರೋಧ ಎಂದಷ್ಟೇ ಇರುವುದು ಸರಿಯಲ್ಲ. ಆದರೆ ಸರಿಯಾದ ಮಾಹಿತಿ ಮತ್ತು ತರ್ಕ ಇಲ್ಲದೆ ಎಲ್ಲರ ಮೇಲೆ ಕೆಸರು ಎರಚುವುದು ಸರಿಯಲ್ಲ. ನಿಜಕ್ಕೂ ಬಾಲಿವುಡ್‌ನ ಈ ಕೊಳಕಿನಲ್ಲಿ ನಮ್ಮ ಪಾತ್ರ ಏನು ಎಂದು ನಾವು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಬೇಕಿದೆ' ಎನ್ನುವುದು ಸ್ವರಾ ಸ್ಪಷ್ಟನುಡಿ.

ಸ್ವರಾ ಭಾಸ್ಕರ್ ಬಾಲಿವುಡ್‌ನ ಗಟ್ಟಿಗಿತ್ತಿ ಎನ್ನುವುದು ನಿಜ. ಯಾರ ಹಂಗಿಗೂ ಒಳಗಾಗದೆ ನೇರ ನುಡಿಗೆ ಈಕೆ ಹೆಸರುವಾಸಿ. ಅಮೆಜಾನ್ ಪ್ರೈಮ್‌ನಲ್ಲಿ ಈಗಾಗಲೆ ಮೊದಲ ಸೀಸನ್ ಪ್ರಸಾರ ಕಂಡಿರುವ ಈಕೆಯ 'ರಸ್‌ಭರಿ' ಸರಣಿ ಎರಡನೆಯ ಸೀಸನ್‌ಗೆ ಸಿದ್ಧವಾಗಿದೆ. ಮೊದಲ ಸೀಸನ್ ಬಗ್ಗೆ ಸೆನ್ಸಾರ್ ಮಂಡಳಿ ಅಧ್ಯಕ್ಷರ ಸಹಿತ ಹಲವರು ಟೀಕೆಯ ಸುರಿಮಳೆ ಹರಿಸಿದ್ದರೂ ಸ್ವರಾ ಅದರಿಂದ ಧೃತಿಗೆಟ್ಟಿಲ್ಲವಂತೆ. 'ಈ ಶೋ ಜನರ ಕುತೂಹಲ ಕೆರಳಿಸಿದೆ. ಹಾಗಾಗಿ ಎರಡನೇ ಸೀಸನ್‌ಗೆ ಬೇಡಿಕೆ ಇದೆ' ಎಂದಿದ್ದಾರೆ ಸ್ವರಾ. ಶಿಕ್ಷಕಿಯೊಬ್ಬರ ಕುರಿತು ಹದಿಹರೆಯದ ವಿದ್ಯಾರ್ಥಿಯೊಬ್ಬ ಗೀಳು ಬೆಳೆಸಿಕೊಳ್ಳುವುದು 'ರಸ್‌ಭರಿ'ಯ ಕಥೆ. ■

## ಜಾಕ್ವೆಲಿನ್ ದಿನಚರಿ

'ಕಳೆದ ಹತ್ತು ವರ್ಷಗಳಿಂದ ನಾನು ಸೋಶ್ಯಲ್ ಲೈಫ್ ಎನ್ನುವುದನ್ನೇ ನೋಡಿಲ್ಲ. ಲೇಟ್‌ನೈಟ್ ಪಾರ್ಟಿಗಳಲ್ಲಿ ಭಾಗವಹಿಸಿಲ್ಲ. ಕೆಲಸದ ಬಗ್ಗೆ ಗಮನ ಕೊಡಬೇಕೆಂದರೆ ರಾತ್ರಿ ಬೇಗ ಮಲಗಿ, ಬೆಳಿಗ್ಗೆ ಬೇಗ ಎದ್ದು ಫಿಟ್‌ನೆಸ್ ಕಡೆಗೆ ಗಮನ ಕೊಡಲೇಬೇಕು. ಅದು ಅನಿವಾರ್ಯ' ಎಂದಿದ್ದಾರೆ 'ಕಿಕ್' ಚಿತ್ರಖ್ಯಾತಿಯ ಜಾಕ್ವೆಲಿನ್ ಫೆರ್ನಾಂಡಿಸ್. ಇನ್‌ಸ್ಟಾಗ್ರಾಮ್‌ನಲ್ಲಿ 4 ಕೋಟಿ ಹಿಂಬಾಲಕರನ್ನು ಹೊಂದಿರುವ ಜಾಕ್ವೆಲಿನ್ 'ಇದಕ್ಕಾಗಿ ವಿಷಾದವಿಲ್ಲ. ವೃತ್ತಿಯಲ್ಲಿ ಸ್ಪರ್ಧೆ ಎದುರಿಸಿ ಬದುಕಲು ಈ ಶಿಸ್ತು ಅನಿವಾರ್ಯ' ಎಂದಿದ್ದಾರೆ.

ಆದರೆ ಕಳೆದ ಒಂದು ತಿಂಗಳಿಂದ ಆಕೆ ಮಾನಸಿಕ ಒತ್ತಡ ಎದುರಿಸುತ್ತಿದ್ದಾರಂತೆ. 'ಮೊದಲಿನಿಂದಲೂ ನಾನು ಯೋಗಾಭ್ಯಾಸ ಮಾಡುತ್ತಿರುವುದರಿಂದ ಈ ಒತ್ತಡ ಎದುರಿಸುವುದು ಸುಲಭವಾಗಿದೆ' ಎಂದಿದ್ದಾರೆ. ಕೋವಿಡ್ ರಜೆಯಿಂದಾಗಿ ಇತರ ನಟಿಯರಂತೆಯೇ ಈಕೆಯೂ ಓಟಿಟಿ ಮಾಧ್ಯಮಕ್ಕೆ ಪ್ರವೇಶ ಪಡೆದಿದ್ದಾರೆ. ಈಕೆ ನಟಿಸಿ ನೆಟ್‌ಫ್ಲೆಕ್ಸ್‌ನಲ್ಲಿ ಇತ್ತೀಚೆಗೆ ಬಿಡುಗಡೆಯಾದ 'ಮಿಸೆಸ್ ಸೀರಿಯಲ್ ಕಿಲ್ಲರ್' ಹೆಚ್ಚು ನೆಗೆಟಿವ್ ಪ್ರತಿಕ್ರಿಯೆಯನ್ನೇ ಪಡೆದಿದೆ. ಇದೀಗ 'ಅಟ್ಯಾಕ್' ಎನ್ನುವ ಇನ್ನೊಂದು ಸರಣಿ ಸಿದ್ಧವಾಗಿದೆ. ಇದರಲ್ಲಿ ಈಕೆಯ ಜೊತೆಗೆ ಜಾನ್ ಅಬ್ರಹಾಂ ಮತ್ತು ರಕುಲ್‌ಪ್ರೀತ್ ಸಿಂಗ್ ಕೂಡಾ ನಟಿಸಿದ್ದಾರೆ.

■ ಬಿಂದು

